# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 196 | Pages. 2 | Date: 13-06-2025, FRIDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 196 - ಪುಟಗಳು : 2 - 13 ಜೂನ್ 2025 ಶುಕ್ರವಾರ | Ph: 8762954248 | ದರ : ₹1

# ಬೀಳುವ ಹಂತದಲ್ಲಿ ಶಾಲಾ ಕೊಠಡಿ

## ಆತಂಕದಲ್ಲೇ ವಿದ್ಯಾರ್ಥಿಗಳ ಕಲಿಕೆ | ಗಮನ ಹರಿಸದ ಶಿಕ್ಷಣ ಇಲಾಖೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸರ್ಕಾರಿ ಶಾಲೆಗೆ ಮಕ್ಕಳ ದಾಖಲಾತಿ ಕಡಿಮೆಯಾಗುತ್ತಿದೆ ಎನ್ನುವ ಕೊರಗು ಒಂದು ಕಡೆಯಾದರೆ ಶಾಲೆಗೆ ಮಕ್ಕಳು ಬಂದರೂ ಸೂಕ್ತ ಸೌಕರ್ಯಗಳಿಲ್ಲದೆ ಪರದಾಡುವ ಪರಿಸ್ಥಿತಿ ಮತ್ತೊಂದು ಕಡೆ ಇದೆ.

ಹೌದು, ತಾಲ್ಲೂಕಿನ ಮೂಕಿಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯು ಉತ್ತಮ ಹಾಜರಾತಿ ಹೊಂದಿದ್ದರೂ ಕೊಠಡಿಗಳು ಶಿಥಿಲಾವಸ್ಥೆ ತಲುಪಿ ಆಡಳಿತ ವ್ಯವಸ್ಥೆಗೆ ಕೈಗನ್ನಡಿಯಾಗಿವೆ. ಶಾಲೆಯು 2 ಕೊಠಡಿಗಳನ್ನು ಹೊಂದಿದ್ದು 39 ವಿದ್ಯಾರ್ಥಿಗಳ ಹಾಜರಾತಿ ಇದೆ. ಇನ್ನೂ ಹಾಜರಾತಿ ಹೆಚ್ಚುವ ನಿರೀಕ್ಷೆ ಇದೆ. ಮುಖ್ಯ ಶಿಕ್ಷಕರು ಸೇರಿ ನಿಯೋಜನೆ ಹೊಂದಿರುವ ಶಿಕ್ಷಕಿ ಹಾಗೂ ಅತಿಥಿ ಶಿಕ್ಷಕಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಶಾಲೆಯಲ್ಲಿ ಉತ್ತಮ ಶಿಕ್ಷಣ ಸಿಗುತ್ತಿರುವುದರಿಂದ ಗ್ರಾಮಸ್ಥರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವಲ್ಲಿ ಉತ್ಸುಕರಾಗಿದ್ದಾರೆ. ಅಲ್ಲದೆ ವಿದ್ಯಾರ್ಥಿ ಹಾಗೂ ಶಾಲೆಗೆ ಅಗತ್ಯವಿರುವ ಶಿಕ್ಷಣ ಮತ್ತು ಕ್ರೀಡೆಗೆ ಪೂರಕ ಪರಿಕರಗಳನ್ನು



ಕಲ್ಪಿಸುತ್ತಿರುವುದು ಶಾಲೆಯ ಬೆಳವಣಿಗೆಗೆ ಮತ್ತೊಂದು ಕಾರಣವಾಗಿದೆ.

ಆದರೆ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರಿಕೆಯಾದರೂ ಸರಿಯಾದ ಕೊಠಡಿಗಳಿಲ್ಲದೆ ಹಾಗೂ ಇರುವ ಕೊಠಡಿಗಳು ಶಿಥಿಲಾವಸ್ಥೆ ತಲುಪಿದ್ದು, ವಿದ್ಯಾರ್ಥಿಗಳು ಅಪಾಯದ ಪರಿಸ್ಥಿತಿಯಲ್ಲಿದ್ದಾರೆ. ಶಾಲಾ ಕಟ್ಟಡದ ಗೋಡೆಗಳು ಬಿರುಕು ಬಿಟ್ಟಿದ್ದು ಕಿಟಕಿ, ಬಾಗಿಲು ಹಾಗೂ ಛಾವಣಿಯ ಮರ ಮುಟ್ಟುಗಳು ಗೆದ್ದಲು ಹಿಡಿದು ಕುಸಿದು ಬೀಳುವ ಹಂತ ತಲುಪಿದೆ. ಈಗಾಗಲೆ ಛಾವಣಿಯಿಂದ ದುಸಿ ಉದುರುತ್ತಿದೆ. ಇಂತಹ ಅಪಾಯದ ಕೆಳಗೆ ಕುಳಿತು ಶಿಕ್ಷಣ ಪಡೆಯಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

### 75 ವರ್ಷ ಇತಿಹಾಸದ ಶಾಲೆ

1951ರ ಸೆ. 17ರಂದು ಶಾಲೆ ಪ್ರಾರಂಭಗೊಂಡಿದ್ದು 75 ವರ್ಷ ತುಂಬಿದೆ. ಸುತ್ತಲಿನ ಅದೆಷ್ಟೋ ಗ್ರಾಮಗಳಲ್ಲಿ ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚಿ ವರ್ಷಗಳೇ ಕಳೆದರೂ ಸಹ ಈ ಗ್ರಾಮದಲ್ಲಿ ಗ್ರಾಮಸ್ಥರು ಹಾಗು ಹಳೆ ವಿದ್ಯಾರ್ಥಿಗಳ ಸಹಕಾರದಿಂದ ವರ್ಷದಿಂದ ವರ್ಷಕ್ಕೆ ಹಾಜರಾತಿ ಹೆಚ್ಚುವ ಮೂಲಕ ಇನ್ನೂ ಅಸ್ತಿತ್ವದಲ್ಲಿದೆ ಎಂದು ಅರಣ್ಯ ಪ್ರೇರಕ ತುಮಕೂರು ಗ್ರಾಮದ ಶಿವೇಗೌಡ ಹೇಳಿದರು.

ಶಾಲೆಯು ಹೊಂದಿರುವ ಎರಡೂ ಕೊಠಡಿಗಳು ಸಹ ದುಸ್ಥಿತಿ ತಲುಪಿದ್ದು ಅದರಲ್ಲಿ 1 ಕಟ್ಟಡವನ್ನು ಸ್ಥಳೀಯ ಕಬ್ಬಳಿ ಗ್ರಾಮ ಪಂಚಾಯಿತಿ ವತಿಯಿಂದ ನರೇಗಾ ಹಾಗೂ ಇತರೆ ಯೋಜನೆಯಡಿ ರಿಪೇರಿ ಮಾಡಲಾಗುತ್ತಿದೆ. ಉಳಿದ ಒಂದು ಕೊಠಡಿಯಲ್ಲಿ ಮುಖ್ಯ ಶಿಕ್ಷಕರ ಕಾರ್ಯ ಹಾಗೂ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ.



ಈ ಕಟ್ಟಡವೂ ಸಹ ಶಿಥಿಲಾವಸ್ಥೆ ತಲುಪಿದೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಪಕ್ಕದಲ್ಲಿಯೇ ಇರುವ ಹಳೆಯ ಹಾಗೂ ಶಿಥಿಲಾವಸ್ಥೆ ತಲುಪಿರುವ ಅಂಗನವಾಡಿ ಕೇಂದ್ರದ ಕಟ್ಟಡದಲ್ಲಿ ಸ್ವಲ್ಪ ಮಕ್ಕಳಿಗೆ ಪಾಠ ಮಾಡಲಾಗುತ್ತಿದೆ. ಶಾಲೆಯು 39 ವಿದ್ಯಾರ್ಥಿಗಳನ್ನು ಹೊಂದಿದ್ದರೂ ಅಗತ್ಯ ಕಟ್ಟಡ ಕಲ್ಪಿಸುವಲ್ಲಿ ಸರ್ಕಾರ ಹಿಂದೇಟು ಹಾಕುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ಅಡುಗೆ ಮನೆಯೂ ಇಲ್ಲ: ಇನ್ನೂ ಈ ಶಾಲೆಗೆ ಸ್ವಂತ ಅಡುಗೆ ಮನೆ ಇಲ್ಲ. ಶಿಥಿಲಾವಸ್ಥೆಯಲ್ಲಿರುವ ಹಳೆ ಶಾಲಾ ಕಟ್ಟಡದಲ್ಲಿ ಅಡುಗೆ ಮಾಡಬೇಕಾದ ಅನಿವಾರ್ಯತೆ ಇದೆ. ಸದ್ಯಕ್ಕೆ ಅಡುಗೆ ಮಾಡುತ್ತಿರುವ ಕೊಠಡಿ ದುಸ್ಥಿತಿಯಲ್ಲಿದ್ದು ಕುಸಿಯುವ ಹಂತದಲ್ಲಿದೆ. ವಿಧಿಯಿಲ್ಲದೆ ಅದರಲ್ಲಿಯೇ ಅಡುಗೆ ಸಿದ್ಧಪಡಿಸಿ ಮಕ್ಕಳಿಗೆ ಬಡಿಸಬೇಕಾಗಿದೆ.

### ಹಳೆ ವಿದ್ಯಾರ್ಥಿಗಳ ಸಹಕಾರ

ಗ್ರಾಮಸ್ಥರು, ಪಾಲಕರು ಹಾಗೂ ಹಳೆ ವಿದ್ಯಾರ್ಥಿ ಸಂಘವು ಪ್ರತಿ ವರ್ಷ ಶಾಲಾ ಮಕ್ಕಳಿಗೆ ಕಲಿಕಾ ಸಾಮಾಗ್ರಿ ನೀಡುವ ಮೂಲಕ ಪ್ರೋತ್ಸಾಹ ನೀಡುತ್ತಿದೆ. ಜೊತೆಗೆ ಶ್ರೀ ಉಡುಸಲಮ್ಮ ಎಂಟರ್ಪ್ರೈಸಸ್ ನವರು ಕಳೆದ 3 ವರ್ಷದಿಂದ ಪ್ರತಿವರ್ಷ 50 ಸಾವಿರ ರೂ. ಮೌಲ್ಯದ ಬ್ಯಾಗ್, ನೋಟ್ ಬುಕ್, ಟ್ರ್ಯಾಕ್ ಸೂಟ್ ಹಾಗೂ ಇತರೆ ಪರಿಕರಗಳನ್ನು ದಾನವಾಗಿ ನೀಡುತ್ತಿರುವುದು ವಿಶೇಷ.

> ಶಾಲಾ ಕಟ್ಟಡಗಳು ದುಸ್ಥಿತಿಯಲ್ಲಿದ್ದು ಗೋಡೆ ಬಿರುಕು ಬಿಟ್ಟಿರುವುದರ ಜೊತೆಗೆ ಛಾವಣಿ ಹಾಳಾಗಿದೆ. ಅಪಾಯದ ಕೆಳಗೆ ಕುಳಿತು ಮಕ್ಕಳು ಪಾಠ ಪ್ರವಚನ ಕೇಳಬೇಕಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ 2 ಕೊಠಡಿ ನಿರ್ಮಿಸಿಕೊಡಬೇಕು.
>
> -ಮಣಿ ಚಂದ್ರಶೇಖರ್, ಎಸ್‌ಡಿಎಂಸಿ ಅಧ್ಯಕ್ಷೆ

### ಎಲ್‌ಕೆಜಿ, ಯುಕೆಜಿ ಪ್ರಾರಂಭ

ಮೂಕಿಕೆರೆ ಗ್ರಾಮದ ಶಾಲೆಯಲ್ಲಿನ ಶಿಕ್ಷಕ ವೃಂದವು ಉತ್ತಮ ಶಿಕ್ಷಣ ನೀಡುತ್ತಿರುವ ಕಾರ್ಯವೈಖರಿಯನ್ನು ಗಮನಿಸುತ್ತಿರುವ ಪಾಲಕರು, ಅಂಗನವಾಡಿಯಿಂದ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸುವ ಮನಸ್ಥಿತಿಯಿಂದ ಹಿಂದೆ ಸರಿದು ಇದೇ ಶಾಲೆಗೆ ಸೇರಿಸುತ್ತಿರುವ ಹಿನ್ನೆಲೆಯಲ್ಲಿ ಎಲ್‌ಕೆಜಿ ಹಾಗೂ ಯುಕೆಜಿ ಪ್ರಾರಂಭಿಸಲಾಗಿದೆ. ಕಳೆದ 2 ವರ್ಷಗಳ ಹಿಂದೆ ಶಾಲೆಯಲ್ಲಿ 4 ವಿದ್ಯಾರ್ಥಿಗಳು ಮಾತ್ರ ಇದ್ದರು. ನಂತರದ ವರ್ಷಗಳಲ್ಲಿ 40ರ ಗಡಿಗೆ ಬಂದಿರುವುದು ಶಾಲಾ ಶಿಕ್ಷಕರ ಕಾರ್ಯವೈಖರಿ ಹಾಗೂ ಗ್ರಾಮಸ್ಥರ ಪರಿಶ್ರಮಕ್ಕೆ ಸಾಕ್ಷಿಯಾಗಿದೆ.

### ಮನವಿಗೆ ಸ್ಪಂದನೆ ಇಲ್ಲ

ಕಳೆದ ಏಳೆಂಟು ವರ್ಷಗಳಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗು ಜನಪ್ರತಿನಿಧಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ವರ್ಷದಿಂದ ವರ್ಷಕ್ಕೆ ಹಾಜರಾತಿ ಹೆಚ್ಚುತ್ತಿರುವುದನ್ನು ತಿಳಿದರೂ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಗ್ರಾಮಸ್ಥರು ಬೇಸರ ವ್ಯಕ್ತಪಡಿಸಿದ್ದಾರೆ.

## ಜೂ. 15ಕ್ಕೆ ಐಎಎಸ್-ಐಪಿಎಸ್‌ಗೆ ತರಬೇತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: 5 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಐಎಎಸ್ ಮತ್ತು ಐಪಿಎಸ್ ಫೌಂಡೇಶನ್ ಕೋರ್ಸ್‌ನ್ನು ಪ್ರಾರಂಭಿಸಲಾಗಿದ್ದು, ಜೂನ್ 15ರ ಭಾನುವಾರ ಉಚಿತ ಓರಿಯಂಟೇಶನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟೈಮ್ಸ್ ಸಮೂಹ ಸಂಸ್ಥೆಗಳ ಸ್ಥಾಪಕ ಕಾರ್ಯದರ್ಶಿ

ಬಿ.ಕೆ. ಗಂಗಾಧರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, 5 ರಿಂದ 12 ನೇ ತರಗತಿ ವಿದ್ಯಾರ್ಥಿಗಳಿಗೆ ಐಎಎಸ್ ಮತ್ತು ಐಪಿಎಸ್ ಫೌಂಡೇಶನ್ ಕೋರ್ಸ್ ಆರಂಭಿಸಿದೆ. ಈ ಕೋರ್ಸ್ ಪ್ರತಿ ಭಾನುವಾರ ಬೆಳಿಗ್ಗೆ 8.30 ರಿಂದ 10.30 ಗಂಟೆವರೆಗೆ ನಡೆಯಲಿದೆ.




ರಾಜ್ಯದ ನುರಿತ ಸಂಪನ್ಮೂಲ ವ್ಯಕ್ತಿಗಳು ಮಕ್ಕಳಿಗೆ ಬೋಧನೆ ಕೊಡಿಸಲಾಗುತ್ತದೆ. ಕೋರ್ಸ್ ಅವಧಿ 6 ತಿಂಗಳು ಆಗಿರುತ್ತದೆ. ಇದೇ ಭಾನುವಾರ 2025 ಜೂನ್ 15 ರಂದು ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಜಿಲ್ಲೆಯ ಎಲ್ಲಾ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಐಎಎಸ್ ಮತ್ತು ಐಪಿಎಸ್ ಓರಿಯೆಂಟೇಶನ್ ಪ್ರೋಗ್ರಾಮ್‌ನ್ನು ಅಕ್ಷರ ಬಳಗ ಆಯೋಜಿಸಿದೆ.

ಪೋಷಕರು ತಮ್ಮ ಮಕ್ಕಳೊಂದಿಗೆ ಅಕ್ಷರ ಅಕಾಡೆಮಿಗೆ ಭೇಟಿ ನೀಡಬಹುದು ಎಂದು ಮಾಹಿತಿ ನೀಡಿದರು. ಇನ್ನು ಪ್ರಾರಂಭದಲ್ಲಿ ನಮ್ಮ ಸಂಸ್ಥೆ ಅನೇಕ ವರ್ಷಗಳ ಕಾಲ ನಷ್ಟದಲ್ಲಿ ಇತ್ತು. ಈಗ ಚೇತರಿಕೆ ಕಂಡು ಸಲ್ಪವಾದರೂ ಸುಧಾರಿಸಿದೆ. ಮಕ್ಕಳಿಂದಲೇ ಜ್ಞಾನರ್ಜನೆ ನೀಡಿದರೇ ಮುಂದೆ ಬರುವ ಸ್ಪರ್ದಾತ್ಮಕ ಪರೀಕ್ಷೆಗಳನ್ನು ಎದುರಿಸಲು ಅನುಕೂಲವಾಗಲಿ ಎಂಬ ಕಾರಣಕ್ಕೆ ವಿದ್ಯಾರ್ಥಿಗಳಿಗೆ ಐಎಎಸ್ ಮತ್ತು ಐಪಿಎಸ್ ಫೌಂಡೇಶನ್ ಕೋರ್ಸ್ ಪ್ರಾರಂಭಿಸಲಾಗಿದೆ. ಕೋರ್ಸ್‌ನ ಪ್ರಮುಖ ಉದ್ದೇಶಗಳೆಂದರೇ ವಿದ್ಯಾರ್ಥಿಗಳು ಪರೀಕ್ಷೆ ಬರೆದು ಏನಾದರೂ ಸಾಧನೆ ಮಾಡಿ ಜಿಲ್ಲೆಗೆ ಹೆಸರು ತರಬೇಕು ಎಂಬುದು ನಮ್ಮ ಗುರಿಯಾಗಿದೆ ಎಂದು ಹೇಳಿದರು. ಆಸಕ್ತರು ರಿಂಗ್ ರಸ್ತೆಯ ಕರ್ನಾಟಕ ಬ್ಯಾಂಕ್ ಕಟ್ಟಡ ವಿದ್ಯಾನಗರದ ಅಕ್ಷರ ಅಕಾಡೆಮಿ ಅಥವಾ ಮೊಬೈಲ್ ಸಂಖ್ಯೆ 7019055269 ಹಾಗೂ 8073912370 ಸಂಪರ್ಕಿಸಬಹುದು ಎಂದರು.

ಅಕ್ಷರ ಅಕಾಡೆಮಿ ವ್ಯವಸ್ಥಾಪಕ ಹಾಗೂ ಉಪನ್ಯಾಸಕ ಡಿ.ಪಿ. ಕಾರ್ತಿಕ್, ಅಕ್ಷರ ಬುಕ್ ಹೌಸ್ ವ್ಯವಸ್ಥಾಪಕ ಮಂಜು, ಅಕ್ಷರ ಅಕಾಡೆಮಿ ಉಪನ್ಯಾಸಕ ಸುಹಾಸ್, ಅಕ್ಷರ ಟ್ಯೂಷನ್ ಮೇಲ್ವಿಚಾರಕಿ ಸೌದರ್ಯ ಇತರರು ಉಪಸ್ಥಿತರಿದ್ದರು.

## ಮೋದಿ ಆಡಳಿತದಲ್ಲಿ ಭಾರತ ಸುಭದ್ರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ಆಡಳಿತದಿಂದ ಕಳೆದ 11 ವರ್ಷಗಳಲ್ಲಿ ಭಾರತ ಸಾಕಷ್ಟು ಪ್ರಗತಿ ಸಾಧಿಸಿದೆ ಎಂದು ಬಿಜೆಪಿ ಮುಖ್ಯ ವಕ್ತಾರ ಅಶ್ವಥ್ ನಾರಾಯಣ್ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಭಾರತದ ಸಂವಿಧಾನ ಪ್ರತಿಯೊಬ್ಬ ನಾಗರಿಕನನ್ನೂ ಸಮಾನವಾಗಿ ಕಂಡು, ಘನತೆಯ ಜೀವನ ಖಾತರಿಪಡಿಸುತ್ತದೆ. ಆದರೂ, ಸ್ವಾತಂತ್ರ್ಯ ನಂತರವೂ ಮೂಲಭೂತ ಸೌಲಭ್ಯಗಳಿಲ್ಲದೆ ತೀವ್ರ ಬಡತನದಲ್ಲಿ ಬದುಕುತ್ತಿದ್ದರು. ಆದರೆ ಮೋದಿ ಅವರು ಅಧಿಕಾರಕ್ಕೆ ಬಂದ ನಂತರ, ಪ್ರತಿಯೊಂದು ಹೆಜ್ಜೆಯೂ ಭಾರತ ಮೊದಲು ಎಂಬ ಬದ್ಧತೆಯೊಂದಿಗೆ ಮುನ್ನಡೆಯುತ್ತಿರುವ



ನಿರ್ಣಾಯಕ ನಾಯಕತ್ವವನ್ನು ಜಗತ್ತಿಗೆ ಸಾರಿ ಹೇಳಿದೆ ಎಂದರು.

ಕಳೆದ 11 ವರ್ಷಗಳಲ್ಲಿ ಜಡತ್ವ ಮುರಿದು, ದಿಟ್ಟ ನಿರ್ಧಾರಗಳ ಮೂಲಕ ವಿಕಸಿತ ಭಾರತಕ್ಕೆ ಭದ್ರ ಬುನಾದಿ ಹಾಕಿದೆ. ಆರಂಭದಲ್ಲಿ ಹೇಳಿದಂತೆ ಈವರೆಗೂ ನುಡಿದಂತೆ ಮೋದಿ ನಡೆದಿದ್ದಾರೆ. ಪಕ್ಷದ ಕಾರ್ಯಕರ್ತರಿಗೆ ಮುಜುಗರ ಆಗುವ ರೀತಿ ನಡೆದುಕೊಂಡಿಲ್ಲ. 11 ವರ್ಷಗಳ ಸಾಧನೆ ಜಗತ್ತು ಮೆಚ್ಚುವ ರೀತಿ ಇದೆ ಎಂದರು.

ಸ್ವಚ್ಛ ಭಾರತ ಅಭಿಯಾನದಡಿ ಮನೆಗೊಂದು ಶೌಚಾಲಯ, ಪ್ರತಿ ಮನೆಗೆ ಶುದ್ಧ ಕುಡಿಯುವ ನೀರು ಪೂರೈಸಲು ಜೆಜೆಎಂ ಯೋಜನೆ ಜಾರಿ ಮಾಡಿದ್ದಾರೆ. ಹೊಗೆರಹಿತ ಮನೆ ನಿರ್ಮಾಣಕ್ಕೆ ಉಜ್ವಲ್ ಯೋಜನೆ ಅಡಿ ಸಿಲಿಂಡರ್ ನೀಡಿದ್ದಾರೆ. ಜನಧನ್ ಖಾತೆ ಮೂಲಕ ಫಲಾನುಭವಿಗಳಿಗೆ ನೇರವಾಗಿ ಹಣ ಸಂದಾಯ ಆಗುತ್ತಿದೆ. ಇದರಿಂದ ಸೋರಿಕೆ ತಡೆಯಲಾಗಿದೆ ರಾಜ್ಯಕ್ಕೂ ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೆ ಸೇರಿದಂತೆ ಹಲವು ರೀತಿಯ ಅಭಿವೃದ್ಧಿ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಜಿಎಸ್‌ಟಿ ವಾಪಸ್ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ಸುಳ್ಳು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದ ಸಾಧನೆ ಶೂನ್ಯ ಅನ್ನೋ ಅಧಿಕಾರ ಕೊಟ್ಟೋರು ಯಾರು, ಅವರ ಸಾಧನೆ ಏನೆಂದು ಮೊದಲು ಹೇಳಲಿ, ಮೂರನೇ ಬಾರಿಗೆ ನಮೋ ಪ್ರಧಾನಿ ಆಗಿರುವುದೇ ಸಾಧನೆಯಿಂದ. ಮೊನ್ನೆ ಹೈಕಮಾಂಡ್ ಇವರಿಗೆ ಎಷ್ಟು ಅಂಕ ನೀಡಿತು ಎಂದು ಪ್ರಶ್ನಿಸಿದರು. ಇವರು ಹಣಕಾಸು, ನೀತಿ ಆಯೋಗದ ಮೀಟಿಂಗ್‌ಗೇ ಹೋಗದೇ ಸುಮ್ಮನೆ ದೂರೋದು ಸರಿಯಲ್ಲ ಎಂದರು. ಶಾಸಕರಾದ ಸಿಮೆಂಟ್ ಮಂಜು, ಹೆಚ್.ಕೆ. ಸುರೇಶ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಅಮಿತ್ ಶೆಟ್ಟಿ, ಗಿರೀಶ್, ವಿಕಸಿತ ಭಾರತ ಜಿಲ್ಲಾ ಸಂಚಾಲಕ ಡಿ.ರಾಜ್‌ಕುಮಾರ್, ಸಹ ಸಂಚಾಲಕ ಗುರುಪ್ರಸಾದ್, ಮುಖಂಡ ಶೋಭನ್ ಬಾಬು ಇದ್ದರು.

## ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ: ಜಾಗೃತಿ ಜಾಥಾ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕಾರ್ಮಿಕ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘದಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ಹಾಸನಾಂಬ ಕಲಾಕ್ಷೇತ್ರದ ವರೆಗೆ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾ ಕಾನೂನು ಸೇವೆಗಳ




ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಮಾತನಾಡಿ, ಅಕ್ಷರ ಕಲಿತು ವಿದ್ಯಾವಂತರಾಗಬೇಕಿರುವ ಮಕ್ಕಳನ್ನು ದುಡಿಮೆಗೆ ಸೇರಿಸಿಕೊಳ್ಳುವುದು ಅಪರಾಧ. ಈ ಸಾಮಾಜಿಕ ಪಿಡುಗನ್ನು ಸಮಾಜದಿಂದ ನಿರ್ಮೂಲನೆ ಮಾಡಲು ಎಲ್ಲರೂ ಕೈ ಜೋಡಿಸಬೇಕು ಎಂದರು.

ಮಕ್ಕಳನ್ನು ದುಡಿಮೆಗೆ ಬಳಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ. ಆರೋಪ ಸಾಬೀತಾದರೆ ತಪ್ಪಿತಸ್ಥರಿಂದ 20 ರಿಂದ 50 ಸಾವಿರ ರೂ. ದಂಡ ಹಾಗೂ 2 ವರ್ಷಗಳ ವರೆಗೆ ಕಾರಾಗೃಹ ಶಿಕ್ಷೆ ವಿಧಿಸಲಾಗುವುದು. ಸಾಮಾಜಿಕ ಪಿಡುಗು ಸದೃಢ ರಾಷ್ಟ್ರ ನಿರ್ಮಾಣಕ್ಕೆ ಅಡ್ಡಿಯಾಗುತ್ತಿದೆ.

ಬಡತನ ಮತ್ತಿತರ ಕಾರಣಗಳಿಂದ ಪೋಷಕರು ಸಹ ಅರಿವಿನ ಕೊರತೆಯಿಂದ ಮಕ್ಕಳನ್ನು ದುಡಿಮೆಗೆ ತಳ್ಳುತ್ತಾರೆ. ಇಂತಹ ಹೇಯ ಕೃತ್ಯಕ್ಕೆ ಕಡಿವಾಣ ಹಾಕಬೇಕು ಎಂದರು.

ಉದ್ದಿಮೆದಾರರು ಮಕ್ಕಳನ್ನು ಕೆಲಸಕ್ಕೆ ತೊಡಗಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ. ಈ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಕೆ.ಎನ್. ಯಮುನಾ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಹೆಚ್. ಎಸ್. ಚಂದ್ರಶೇಖರ್, ಲೀಲಾವತಿ, ಕೆ.ಟಿ. ಜಯಶ್ರೀ, ಮುರುಳಿಧರ್, ಕಲಾವಿದ ಬಿ.ಟಿ. ಮಾನವ ಹಾಗೂ ಇತರರಿದ್ದರು.

## ಬಾಲ ಕಾರ್ಮಿಕ ಪದ್ಧತಿ ಸಾಮಾಜಿಕ ಪಿಡುಗು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ವಿದ್ಯಾರ್ಥಿ ಜೀವನ ಅತ್ಯಮೂಲ್ಯವಾಗಿದ್ದು ಯಾರೂ ಸಹ ಅದನ್ನು ಅನ್ಯ ಕಾರ್ಯಕ್ಕೆ ವಿನಿಯೋಗಿಸಬಾರದು. ಬಾಲ ಕಾರ್ಮಿಕ ಪದ್ಧತಿಯಂತಹ ಸಾಮಾಜಿಕ ಪಿಡುಗಿನ ವಿರುದ್ಧ ಎಲ್ಲರೂ ಹೋರಾಡಬೇಕು ಎಂದು ಜೆಎಂಎಫ್‌ಸಿ ಸಿವಿಲ್ ನ್ಯಾಯಾಧೀಶೆ ಚೇತನಾ ತಿಳಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಬಾಲಕರ ಕಾಲೇಜಿನಲ್ಲಿ ನ್ಯಾಯಾಂಗ ಇಲಾಖೆ ಹಾಗೂ ವಕೀಲರ ಸಂಘದಿಂದ ಗುರುವಾರ ಹಮ್ಮಿಕೊಂಡಿದ್ದ ಬಾಲಕಾರ್ಮಿಕ ವಿರೋಧಿ ದಿನದಲ್ಲಿ ಮಾತನಾಡಿ, ಬಡತನ, ಪೋಷಕರಲ್ಲಿಯೇ ತಿಳುವಳಿಕೆ ಕಡಿಮೆ ಹೀಗೆ ನಾನಾ ಕಾರಣಗಳಿಂದ ಮಕ್ಕಳು ದುಡಿಮೆಯಲ್ಲಿ ತೊಡಗುತ್ತಾರೆ. ಬಡತನದಿಂದ ಮುಕ್ತವಾಗಿ ಶಿಕ್ಷಣ ಹೊಂದಲು ಸರ್ಕಾರ ಉಚಿತ ಶಿಕ್ಷಣ, ವಸತಿ ಶಾಲೆಗಳ ಅನುಕೂಲತೆ ಹಾಗೂ ಎಲ್ಲ ರೀತಿಯ



ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾನು ಕಷ್ಟವಾದರೂ ಮಕ್ಕಳನ್ನು ಸತ್ಪ್ರಜೆಯಾಗಿ ಮಾಡಬೇಕೆನ್ನುವ ಪೋಷಕರ ನಿರ್ಧಾರದಿಂದ ಮಾತ್ರ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯ. ಶಾಲೆ ನಂತರದಲ್ಲಿ ಸ್ವಂತ ಮನೆ, ತೋಟ, ಅವರ ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುವುದು ಬಾಲ ಕಾರ್ಮಿಕ ಪದ್ಧತಿ ಎನಿಸಿಕೊಳ್ಳುವುದಿಲ್ಲ. ಸಮಾಜದ ಎಲ್ಲರೂ ಬಾಲ ಕಾರ್ಮಿಕ ಪದ್ಧತಿಯನ್ನು ವಿರೋಧಿಸಿ ಬಡ ಮಕ್ಕಳಿಗೆ ಸೂಕ್ತ ನಿರ್ದೇಶನ ನೀಡಿ ಸಹಕರಿಸಬೇಕಿದೆ ಎಂದರು. ಅಪರ ನ್ಯಾಯಾಧೀಶೆ ಐಶ್ವರ್ಯ ಎಸ್. ಗುದಿನ್ನಿ, ಪುರಸಭಾ ಅಧ್ಯಕ್ಷ ಎಚ್.ಕೆ. ಪ್ರಸನ್ನ, ಬಿಇಒ ಸೋಮಲಿಂಗೇಗೌಡ, ಪ್ರಾಂಶುಪಾಲ ಪಿ.ಪ್ರಾಣೇಶ್ವರ್‌ರಾವ್, ವಕೀಲರ ಸಂಘದ ಅಧ್ಯಕ್ಷ ಎಂ.ವಿ.ಶಿವಕುಮಾರ್, ವಕೀಲ ಕೆ.ಆರ್. ಜಯಪ್ರಕಾಶ್ ಉಪಸ್ಥಿತರಿದ್ದರು.

## ವಸತಿ ಸಂಕೀರ್ಣ ಶೀಘ್ರ ಲೋಕಾರ್ಪಣೆ: ಶಾಸಕ ಬಾಲಕೃಷ್ಣ



ಚನ್ನರಾಯಪಟ್ಟಣ: ಪಟ್ಟಣದ ಪ್ರವಾಸಿ ಮಂದಿರದ ಬಳಿ ಲೋಕೋಪಯೋಗಿ ಇಲಾಖೆಯಿಂದ 5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ 12 ಮನೆಗಳ ವಸತಿ ಸಂಕೀರ್ಣದ ಕಾಮಗಾರಿ ಶೇ.90ರಷ್ಟು ಮುಗಿದಿದ್ದು, ಬಾಕಿ ಉಳಿದಿರುವ ಕಾಮಗಾರಿಯನ್ನ ಇನ್ನೊಂದು ತಿಂಗಳಲ್ಲಿ ಮುಗಿಸಿ ಸರ್ಕಾರಿ ಅಧಿಕಾರಿಗಳಿಗೆ ವಾಸ್ತವ್ಯಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ತಿಳಿಸಿದರು.

ಗುರುವಾರ ಕಾಮಗಾರಿ ವೀಕ್ಷಿಸಿ ಮಾತನಾಡಿ, ಗುಣಮಟ್ಟದ ಕಾಮಗಾರಿಯನ್ನು ಗುತ್ತಿಗೆದಾರರು ನಿರ್ವಹಿಸಿದ್ದು, 5 ಕೋಟಿ ರೂ. ವೆಚ್ಚದಲ್ಲಿ 12 ಮನೆಗಳಿಗೆ ಈ ಸಂಕೀರ್ಣದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಪ್ರತಿ ಮನೆಗೆ ಎರಡು ಬೆಡ್ ರೂಂ. ಗಳಿಗೆ ಅವಕಾಶ ಕಲ್ಪಿಸಲಾಗಿದೆ. ಕೆಳ ಭಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. 12 ಮನೆಗಳ ಪೈಕಿ 6 ಮನೆಗಳನ್ನ ಆರೋಗ್ಯ ಇಲಾಖೆಗೆ ಮೀಸಲಿಟ್ಟು, ಉಳಿದ ಆರು ಮನೆಗಳನ್ನು ಇತರೆ ಇಲಾಖೆ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗುವುದು ಎಂದರು. ಸರ್ಕಾರಿ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ವಾಸ್ತವ್ಯ ಹೂಡಿ ಈ ಮೂಲಕ ಆಡಳಿತಕ್ಕೆ ಚುರುಕು ನೀಡುವ ಸಲುವಾಗಿ ವಸತಿ ಸಂಕೀರ್ಣಗಳನ್ನ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ನಿರ್ಮಿಸಲಾಗುತ್ತಿದೆ. ವಸತಿ ಸಂಕೀರ್ಣದ ಮುಂಭಾಗ ಇಂಟರ್ ಲಾಕ್ ಅಳವಡಿಸುವಂತೆ ಸೂಚಿಸಿದ್ದು, ಕಾಮಗಾರಿ ಪಟ್ಟಿಯಲ್ಲಿ ಸೇರಿಲ್ಲದ ಕಾರಣ ಹೆಚ್ಚುವರಿ ಅನುದಾನವನ್ನ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದ ಶಾಸಕರು, ಹಳೆ ಪ್ರವಾಸಿ ಮಂದಿರ ಶಿಥಿಲಗೊಂಡ ಹಿನ್ನೆಲೆಯಲ್ಲಿ ನವೀಕರಣಗೊಳಿಸಲಾಗಿದೆ. ಅದರ ಕಾಮಗಾರಿ ಮುಗಿದು ಪೀಠೋಪಕರಣಗಳ ಅಳವಡಿಕೆಯೂ ಸಂಪೂರ್ಣ ಮುಗಿದಿದೆ. ಆಷಾಢದ ತರುವಾಯ ವಸತಿ ಸಂಕೀರ್ಣ ಮತ್ತು ಪ್ರವಾಸಿಮಂದಿರ ಎರಡನ್ನೂ ಒಟ್ಟಿಗೆ ಉದ್ಘಾಟಿಸಲಾಗುವುದು ಎಂದರು.

ಈ ವೇಳೆ ಟಿಎಪಿಸಿಎಂಎಸ್ ಅಧ್ಯಕ್ಷ ಅನಿಲ್‌ಕುಮಾರ್ ಪುರಸಭಾ ಅಧ್ಯಕ್ಷ ಸಿ.ಎನ್.ಮೋಹನ್, ಮುಖಂಡ ಅಡಗೂರು ನಾರಾಯಣ, ಜಿಲ್ಲಾ ಪಂಚಾಯಿತಿ ಎಂಜಿನಿಯರ್ ಕಾಶಿನಾಥ್, ಗುತ್ತಿಗೆದಾರ ಸುಪ್ರೀತ್ ಇತರಿದ್ದರು.

# ಬಿದರಕೆರೆಗೆ ತಹಶೀಲ್ದಾರ್ ಭೇಟಿ ಹಳ್ಳ ನಿರ್ಮಾಣ ಕಾಮಗಾರಿ ಸ್ಥಗಿತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಳೇಬೀಡು: ಹೋಬಳಿಯ ಬಿದರಕೆರೆಗೆ ಮಳೆ ನೀರು ಹರಿಯಲು ಅಡ್ಡಯಾಗಿ ಹಳ್ಳ ನಿರ್ಮಾಣಕ್ಕೆ ಮುಂದಾಗಿದ್ದ ಸ್ಥಳಕ್ಕೆ ತಾಲ್ಲೂಕು ಆಡಳಿತ ಅಧಿಕಾರಿಗಳು ಭೇಟಿ ನೀಡಿದ್ದರಿಂದ ಕಾಮಗಾರಿ ಸ್ಥಗಿತಗೊಳಿಸಲಾಗಿದೆ.

ಕೆರೆಗೆ ನೀರು ಹರಿಯಲು ಕೆಲವು ಕಡೆ ಮಾತ್ರ ಹಳ್ಳ ಇದೆ. ಹೀಗಾಗಿ ಬಿದರಕೆರೆಗೆ ಮಳೆ ನೀರು ತಲುಪದೆ ಪೋಲಾಗುತ್ತಿತ್ತು ಎಂದು ತಹಶೀಲ್ದಾರ್ ಎಂ.ಮಮತಾ ಸರ್ವೆ ಹಾಗೂ ಕಂದಾಯ ಸಿಬ್ಬಂದಿ ಜೊತೆ ಸ್ಥಳ ಪರಿಶೀಲನೆ ನಡೆಸಿದರು. ಚೀಲನಾಯ್ಕನಹಳ್ಳಿ ಗಡಿ ಬಳಿ ಜಮೀನುಗಳಲ್ಲಿ ಹಕ್ಕಿನ ಜಮೀನುಗಳು ಕಂಡು ಬಂದವು. ಹೀಗಾಗಿ ಹಳ್ಳ ಹರಿಯಲು ಅವಕಾಶ ಇಲ್ಲದಂತಾಗಿರುವುದು ತಹಶಿಲ್ದಾರ್ ಗಮನಕ್ಕೆ ಬಂತು. ಹಳ್ಳ ನಿರ್ಮಾಣ ಉದ್ದೇಶಿತ ಜಮೀನುಗಳ ರೈತರೊಂದಿಗೆ ಅವರು ಮಾತುಕತೆ ನಡೆಸಿದರು.

ಪೂರ್ವಿಕರಿಂದ ನಮಗೆ ಜಮೀನು ಬಂದಿದೆ ನಾವು ಒತ್ತುವರಿ ಮಾಡಿಲ್ಲ. ನಮ್ಮ ಹಕ್ಕಿನ ಜಮೀನಿನಲ್ಲಿ ಕೃಷಿ ಕಾಯಕ ನಡೆಸಲು ಅವಕಾಶ ಮಾಡಿಕೊಡಿಟಿ ಎಂದು ರೈತರಾದ ಈಶ್ವರಪ್ಪ ಹಾಗೂ ಎಚ್.ಸಿ.ಪ್ರವೀಣ್ ಕೇಳಿಕೊಂಡರು.

ಕೆಲಸ ಆರಂಭಿಸುವ ಸಮಯಕ್ಕೆ ಸರಿಯಾಗಿ ದಲಿತ ಮುಖಂಡರು ವಿರೋಧ ವ್ಯಕ್ತಪಡಿಸಿದರು. ಸಾಕಷ್ಟು ಕಡೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ತೆರವು ಮಾಡಬೇಕು ಎಂದು ದಲಿತ ಮುಖಂಡರು ಪಟ್ಟು ಹಿಡಿದರು. ಬೆಳಿಗ್ಗೆಯಿಂದ ಸಂಜೆವರೆಗೂ ದಲಿತ ಮುಖಂಡರು ಅಧಿಕಾರಿಗಳೊಂದಿಗೆ ವಾದ ಮಾಡಿದರು. ಸಂಜೆ ವೇಳೆಗೆ ಮಳೆರಾಯನ ಆಗಮನ ಸಹ ಆಯಿತು ಹೀಗಾಗಿ ಹಳ್ಳ ನಿರ್ಮಾಣ ಕಾರ್ಯ ಸ್ಥಗಿತವಾಯಿತು.

ಇದೇ ವೇಳೆ ತಹಶಿಲ್ದಾರ್ ಎಂ.ಮಮತಾ ಮಾತನಾಡಿ, ಮಳೆ ಹೆಚ್ಚಿನ ಪ್ರಮಾಣದಲ್ಲಿ ಬಿದ್ದಾಗ ನೀರು ಹರಿಯಲು ಅವಕಾಶ ದೊರಕದೆ, ರಭಸದ ನೀರು ಎಲ್ಲೆಂದರಲ್ಲಿ ಹರಿದು ಅನಾಹುತ ಸಂಭವಿಸುವ ಸಾಧ್ಯತೆ ಇರುತ್ತದೆ. ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಹಕ್ಕಿನ ಜಮೀನುಗಳಿಗೂ ಹಾನಿ ಆಗುವ ಅವಕಾಶ ಇರುತ್ತದೆ. ಹಾಗಾಗಿ ಹಳ್ಳ ನಿರ್ಮಾಣ ಆರಂಭಿಸಲಾಗಿದೆ. ಹಕ್ಕಿನ ಜಮೀನುಗಳ ದಾಖಲಾತಿಯನ್ನು ಪರಿಶೀಲಿಸುತ್ತೇವೆ. ಕಾನೂನಾತ್ಮಕವಾಗಿ ನೂರಾರು ಜನರು ಸಮಸ್ಯೆ ನಿವಾರಣೆಗಾಗಿ ಕ್ರಮ ಕೈಗೊಳ್ಳುತ್ತೇವೆ. ಬಿದರಕೆರೆ ಹಳ್ಳದ ಸಮಸ್ಯೆ ಮಾತ್ರವಲ್ಲದೆ ಸಾರ್ವಜನಿಕರು ಮಾಹಿತಿ ನೀಡಿರುವ ಬೇರೆ ಒತ್ತುವರಿ ತೆರವಿಗೂ ಕ್ರಮ ಕೈಗೊಳ್ಳುತ್ತೇವೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಎಚ್.ಆರ್.ಮಧು, ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಉಪಾಧ್ಯಕ್ಷ ಸೀತಾರಾಮು, ದಲಿತ ಮುಖಂಡರಾದ ಭೈರೇಶ್, ಶಿವಕುಮಾರ್, ಕೃಷ್ಣ, ರೈತ ಸಂಘ ಉಪಾಧ್ಯಕ್ಷ ಎಲ್.ಈ. ಶಿವಪ್ಪ ಇದ್ದರು.

# 24 ಬಾಲ ಕಾರ್ಮಿಕರ ರಕ್ಷಿಸಿದ ಕಾರ್ಮಿಕ ಇಲಾಖೆ

## ಒಂದೂವರೆ ವರ್ಷದ ವರದಿ | 6 ಪ್ರಕರಣಗಳ ವಿಚಾರಣೆ ಮುಕ್ತಾಯ




ಹಾಸನ: ಕಳೆದ ಒಂದೂವರೆ ವರ್ಷದಲ್ಲಿ ಜಿಲ್ಲೆಯಲ್ಲಿ 24 ಬಾಲ ಕಾರ್ಮಿಕರನ್ನು ರಕ್ಷಿಸಲಾಗಿದ್ದು, ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಎಷ್ಟೇ ಜಾಗೃತಿ ಕಾನೂನು ಬಿಗಿಗೊಳಿಸಿದರೂ ಮಕ್ಕಳನ್ನು ದುಡಿಮೆಗೆ ತಳ್ಳುತ್ತಿರುವ ಅಮಾನವೀಯ ಘಟನೆಗಳು ವರದಿಯಾಗುತ್ತಲೇ ಇವೆ.

2024-25ನೇ ಸಾಲಿನಲ್ಲಿ 19 ಹಾಗೂ 2025ರ ಜನವರಿಯಿಂದ ಇಲ್ಲಿವರೆಗೆ ಐವರು ಬಾಲಕರನ್ನು ಕಾರ್ಮಿಕ ಇಲಾಖೆ ಅಧಿಕಾರಿಗಳು ಪತ್ತೆ ಹಚ್ಚಿ ದುಡಿತದಿಂದ ಪಾರು ಮಾಡಿದ್ದಾರೆ. 19 ಮಕ್ಕಳಲ್ಲಿ 15 ಮಕ್ಕಳು ಕಿಶೋರ ಕಾರ್ಮಿಕರಾಗಿದ್ದರೆ (14 ರಿಂದ 18 ವಯಸ್ಸು), 4 ಮಕ್ಕಳು ಬಾಲ ಕಾರ್ಮಿಕರಾಗಿದ್ದಾರೆ. ಈ ವರ್ಷ ಪತ್ತೆಯಾದ ಐದು ಮಕ್ಕಳು ಸಹ ಕಿಶೋರ ಕಾರ್ಮಿಕರಾಗಿದ್ದಾರೆ. ಈ ಸಂಬಂಧ ಕಾರ್ಮಿಕ ಇಲಾಖೆ ಅಧಿಕಾರಿಗಳು ದಾಖಲಿಸಿದ್ದ ಎಫ್ಐಆರ್ ಅನುಸಾರ 6 ಪ್ರಕರಣಗಳ ವಿಚಾರಣೆ ನ್ಯಾಯಾಲಯದಲ್ಲಿ ಮುಗಿದು ಕೆಲಸಕ್ಕೆ ಇಟ್ಟುಕೊಂಡಿದ್ದವರಿಗೆ ತಲಾ 50 ಸಾವಿರ ರೂ. ದಂಡ ಹಾಗು ಜೈಲು ಶಿಕ್ಷೆ ವಿಧಿಸಲಾಗಿದೆ. ಉಳಿದ ಪ್ರಕರಣಗಳು ವಿಚಾರಣೆ ಹಂತದಲ್ಲಿವೆ.

ಪತ್ತೆಯಾದ ಬಾಲ ಕಾರ್ಮಿಕರಲ್ಲಿ 10 ಜನರು ಜಿಲ್ಲೆಯವರೇ ಆಗಿದ್ದು, ಚಿಕ್ಕಮಗಳೂರು ಜಿಲ್ಲೆಯ ಒಂದು ಮಗು ಹಾಗು ಬಿಹಾರ, ಅಸ್ಸಾಂ, ಒರಿಸ್ಸಾ, ಉತ್ತರ ಪ್ರದೇಶ ರಾಜ್ಯಕ್ಕೆ ಸೇರಿದವರಾಗಿದ್ದಾರೆ. ಎಲ್ಲಾ ಮಕ್ಕಳನ್ನು ಸುರಕ್ಷಿತವಾಗಿ ಅವರ ಪಾಲಕರಿಗೆ ಒಪ್ಪಿಸಲಾಗಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಕೆ.ಎನ್. ಯಮುನಾ ಅವರು ತಿಳಿಸಿದ್ದಾರೆ.

### ಶಿಕ್ಷಾರ್ಹ ಅಪರಾಧ

ವ್ಯಾಸಂಗದ ಅವಧಿಯಲ್ಲಿ ಮಕ್ಕಳನ್ನು ದುಡಿಮೆಗೆ ಬಳಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ. ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವವರಿಗೆ 20 ರಿಂದ 50 ಸಾವಿರ ರೂ. ವರೆಗೆ ದಂಡ ಹಾಗು 6 ರಿಂದ 2 ವರ್ಷದ ವರೆಗೆ ಜೈಲು ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಕಾರ್ಮಿಕ ಇಲಾಖೆ, ಕಂದಾಯ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ತಿಂಗಳಿಗೊಮ್ಮೆ ದಿಢೀರ್ ಭೇಟಿ ಮೂಲಕ ಬಾಲ ಕಾರ್ಮಿಕರ ಪತ್ತೆಗೆ ಮುಂದಾಗಿದ್ದಾರೆ. ಮತ್ತೆ ಸಾರ್ವಜನಿಕರು ನೀಡುವ ದೂರು ಆಧರಿಸಿ ದಾಳಿ ಮಾಡಲಾಗುತ್ತಿದೆ.

### ಅನುಮತಿ ಪಡೆದರೆ ತೊಂದರೆ ಇಲ್ಲ

6 ರಿಂದ 14 ವರ್ಷದೊಳಗಿನ ಮಕ್ಕಳನ್ನು ದುಡಿಮೆಗೆ ಬಳಸಿಕೊಳ್ಳುವುದು ಅಪರಾಧ. ಆದರೆ 14 ರಿಂದ 18 ವರ್ಷದೊಳಗಿನ ಕಿಶೋರಾವಸ್ಥೆ ಮಕ್ಕಳನ್ನು ನಿಗದಿತ ಸ್ಥಳಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಆದರೆ ಜಿಲ್ಲೆಯಲ್ಲಿ ಯಾವ ಉದ್ದಿಮೆದಾರರು ಕಾರ್ಮಿಕ ಇಲಾಖೆಯಿಂದ ಅನುಮತಿ ಪಡೆದಿಲ್ಲ. ಅರಸೀಕೆರೆಯ ಗ್ಯಾರೇಜ್, ಹಾಸನದ ಕೈಗಾರಿಕಾ ಪ್ರದೇಶದಲ್ಲಿರುವ ಗ್ಯಾರೇಜ್‌ಗಳಲ್ಲಿ ಕಿಶೋರ ಕಾರ್ಮಿಕರನ್ನು ಅಧಿಕ ಪ್ರಮಾಣದಲ್ಲಿ ಬಳಸಿಕೊಳ್ಳಲಾಗುತ್ತಿದೆ. ಕಿಶೋರ ಕಾರ್ಮಿಕರನ್ನು ನೇಮಿಸಿಕೊಳ್ಳಲು ಇರುವ ನಿಯಮ ಪಾಲಿಸುವಂತೆ ಸೂಚಿಸಿದರೂ ಪಾಲನೆಯಾಗುತ್ತಿಲ್ಲ. ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ಬಳಸಿಕೊಳ್ಳುವುದಾದರೆ ದಿನಕ್ಕೆ 6 ಗಂಟೆ ಕೆಲಸ ಕೊಡಬೇಕು. ಮೂರು ಗಂಟೆಯಾದ ಬಳಿಕ ಒಂದು ಗಂಟೆ ವಿಶ್ರಾಂತಿ ಕಲ್ಪಿಸಬೇಕು. ಸಂಜೆ 7 ರಿಂದ ಬೆಳಿಗ್ಗೆ 8ರ ವರೆಗೆ ಕೆಲಸ ಮಾಡಿಸಿಕೊಳ್ಳಬಾರದು. ಅಪಾಯಕಾರಿ ಕೆಲಸವನ್ನು ಮಕ್ಕಳಿಂದ ಮಾಡಿಸಬಾರದು ಹಾಗು ಆ ಕೆಲಸ ಮಾಡಲು ಬಾಲಕ ದೈಹಿಕ ಹಾಗು ಮಾನಸಿಕವಾಗಿ ಸದೃಢನಾಗಿದ್ದಾನೆ ಎಂಬುದರ ಕುರಿತು ವೈದ್ಯಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆಯಬೇಕು. ಈ ಎಲ್ಲಾ ನಿಯಮ ಪಾಲಿಸಿದರೆ ಕಾರ್ಮಿಕ ಇಲಾಖೆಯಿಂದ ಯಾವ ಅಡ್ಡಿಯೂ ಇರುವುದಿಲ್ಲ.

# ವಿಜಾಪುರ ಅರಣ್ಯ ಗ್ರಾಮದಲ್ಲಿ ನೂತನ ಆಸ್ಪತ್ರೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ವಿಜಾಪುರ ಅರಣ್ಯ ಗ್ರಾಮ ಪಂಚಾಯಿತಿ ಕೇಂದ್ರದಲ್ಲಿ ನೂತನವಾಗಿ ಆರೋಗ್ಯ ಕೇಂದ್ರ ಕಟ್ಟಡ 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳಲಿದೆ ಎಂದು ಶಾಸಕ ಎ.ಮಂಜು ತಿಳಿಸಿದರು.

ನೂತನ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲ್ಲೂಕಿನ ಬಹುತೇಕ ಗ್ರಾಪಂಗಳ ಕೇಂದ್ರ ಸ್ಥಾನದಲ್ಲಿ ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಹಿಂದೆಯೇ ತಾಲ್ಲೂಕಿನ ದಾರಿಕೊಂಗಳಲೆ ಗ್ರಾಮಕ್ಕೆ ಆರೋಗ್ಯ ಕೇಂದ್ರ ಮಂಜೂರಾಗಿತ್ತು. ಆದರೆ ಅದನ್ನು ಬದಲಿಸಿ ಗ್ರಾಪಂ ಕೇಂದ್ರದಲ್ಲಿ ಆರಂಭಿಸಲಾಗುತ್ತಿದೆ. ಇದರಿಂದ ಹತ್ತಾರು ಗ್ರಾಮಗಳ ಜನರು ಪ್ರಾಥಮಿಕ ಚಿಕಿತ್ಸೆ ಪಡೆದುಕೊಳ್ಳಲು ಅನುಕೂಲವಾಗಲಿದೆ ಎಂದು ಹೇಳಿದರು.

ನೂತನವಾಗಿ ನಿರ್ಮಾಣಗೊಳ್ಳುವ ಆಸ್ಪತ್ರೆ ಕಟ್ಟಡದಲ್ಲಿ ವೈದ್ಯರು, ದಾದಿಯರ ವಾಸ್ತವ್ಯಕ್ಕೆ ಅವಕಾಶ ಮಾಡಿಕೊಡಲಾಗಿದೆ. ಇಲ್ಲಿ ಕಾರ್ಯನಿರ್ವಹಿಸುವ ವೈದ್ಯರು, ದಾದಿಯರು, ಸಿಬ್ಬಂದಿ ಕೇಂದ್ರ ಸ್ಥಾನದಲ್ಲಿಯೇ ಉಳಿದು ದಿನದ 24 ಗಂಟೆ ಪ್ರಾಥಮಿಕ ಚಿಕಿತ್ಸೆ ಕೊಡಬೇಕಿದೆ. ಈ ವ್ಯವಸ್ಥೆ ತುಂಬಾ ಅನುಕೂಲಕರವಾಗಿದೆ ಎಂದರು.

ಕಟ್ಟಡ ನಿರ್ಮಾಣಕ್ಕೆ ಗುರುತು ಮಾಡಿರುವ ಜಾಗದ ಖಾತೆ ಸೇರಿದಂತೆ ಇತರೆ ಮೂಲಕ ಸೌಕರ್ಯಗಳನ್ನು ಗ್ರಾಪಂ ಆಡಳಿತ ಕಲ್ಪಿಸಬೇಕಿದೆ. ಕಾಮಗಾರಿ ಗುತ್ತಿಗೆ ಅವಧಿ 4 ತಿಂಗಳು ಆಗಿದ್ದು, ಈ ಅವಧಿಯಲ್ಲಿ ಕಾಮಗಾರಿಯನ್ನು ಗುಣಮಟ್ಟದಿಂದ ನಿರ್ವಹಿಸಿ ಸಾರ್ವಜನಿಕ ಬಳಕೆಗೆ ಅವಕಾಶ ಮಾಡಿಕೊಡಬೇಕೆಂದು ಗುತ್ತಿಗೆದಾರ ಮತ್ತು ಪಿಡಿಒಗೆ ಶಾಸಕರು ಸೂಚನೆ ನೀಡಿದರು.

ಇದುವರೆಗೂ ವಾಸದ ಮನೆಗಳು, ಖಾಲಿ ನಿವೇಶನಗಳ ಖಾತೆಗಳನ್ನು ಮಾಡಿಸಿಕೊಳ್ಳದೇ ಇರುವವರು ಸೂಕ್ತ ದಾಖಲೆಗಳನ್ನು ಪಂಚಾಯಿತಿಗೆ ಸಲ್ಲಿಸಿ ಇ-ಸ್ವತ್ತು ಮಾಡಿಸಿಕೊಳ್ಳಬೇಕು. ಪಂಚಾಯಿತಿ ವ್ಯಾಪ್ತಿಯಲ್ಲಿನ ನಿವಾಸಿಗಳಿಗೆ ಈ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಗ್ರಾಪಂ ಆಡಳಿತ ಮಾಡಬೇಕಿದೆ. ಸೂಕ್ತ ದಾಖಲೆಗಳನ್ನು ಸಲ್ಲಿಸದೇ ಕೇವಲ ಮಾತಿನಿಂದ ಯಾವುದೇ ಕೆಲಸಗಳು ನಡೆಯುವುದಿಲ್ಲ. ಅಧಿಕಾರಿಗಳು, ಸಿಬ್ಬಂದಿ ಜನರನ್ನು ಸತಾಹಿಸದೇ ಕೆಲಸಗಳನ್ನು ಮಾಡಿಕೊಡಬೇಕೆಂದು ಅವರು ತಿಳಿಸಿದರು.

ಗ್ರಾಪಂ ಅಧ್ಯಕ್ಷೆ ಶಿವಮ್ಮ, ಉಪಾಧ್ಯಕ್ಷ ರಮೇಶ್, ಸದಸ್ಯರಾದ ಕುಮಾರ್, ಲಕ್ಷ್ಮಮ್ಮ, ಕೃಷ್ಣೇಗೌಡ, ಹೇಮಂತ್, ಪಿಡಿಒ ರಾಜೇಗೌಡ, ಕಾರ್ಯದರ್ಶಿ ಗೋಪಾಲ್, ಮುಖಂಡರಾದ ದಿವಾಕರ್, ವೆಂಕಟೇಶ್, ಬಾಣದಹಳ್ಳಿ ಗಣೇಶ್, ನಂಜುಂಡಪ್ಪ, ದೊರೆಸ್ವಾಮಿ, ನವೀನ್ ಇತರರು ಹಾಜರಿದ್ದರು.

# ಗ್ಯಾರಂಟಿ ಯೋಜನೆ ಅರ್ಹರಿಗೆ ತಲುಪಲಿ

ಹಾಸನ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳು ಫಲಾನುಭವಿಗಳಿಗೆ ವಿಳಂಬವಿಲ್ಲದೆ ತಲುಪಬೇಕು ಎಂದು ತಾಲ್ಲೂಕು ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಬಿ.ಕೆ. ರಂಗಸ್ವಾಮಿ ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ಗ್ಯಾರಂಟಿ ಯೋಜನೆಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ಸಭೆ ನಡೆಸಿ ಮಾತನಾಡಿದ ಅವರು, ಹೋಬಳಿ ಮಟ್ಟದಲ್ಲಿ ಗ್ಯಾರಂಟಿ ಯೋಜನೆಯ ಶಿಬಿರ ಆಯೋಜಿಸಿ ಗ್ಯಾರಂಟಿ ಯೋಜನೆ ಫಲಾನುಭವಿಗಳ ಕುಂದು ಕೊರತೆಗಳ ಅಹವಾಲು ಸ್ವೀಕರಿಸಿ ಪರಿಹಾರ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

# ಪಾಪೀಯದಿವಸಾ; ಪೃಥಿವೀ ಗತಯೌವನಾ ಇದು ಅದೇ ದಿನಗಳಾ?

ಇತ್ತೀಚಿಗಿನ ಯಾವುದೇ ಕ್ರಿಮಿನಲ್ ನಡೆಯನ್ನು ನೀವು ಎಲ್ಲೇ ನೋಡಿ, ನಿಮ್ಮ ಕಾಲಬುಡದಿಂದ, ನಿಮ್ಮ ತಾಲ್ಲೂಕಿನಿಂದ, ನಿಮ್ಮ ಜಿಲ್ಲೆಯಿಂದ ಜಗತ್ತಿನ ಯಾವುದೋ ಮೂಲೆಯ ತನಕ ಒಂದು ಬಾರಿ ಕ್ರಿಮಿನಲ್‌ಗಳು, ಕೊಲೆಗಡುಕರ ಪಟ್ಟಿ ತೆರೆದು ನೋಡಿ, ಕೃತ್ಯ ಎಸಗಿದ ಹೆಚ್ಚಿನವರು ಎಳಸು ವಯಸ್ಸಿನವರೇ ಅತಿ ಹೆಚ್ಚು ಇರುವುದು. ಏನಾಗುತ್ತಿದೆ ?

**- ರವಿ ಚಿಕ್ಕನಾಯಕನಹಳ್ಳಿ**

**ಕನ್ನಡ ಪೋಸ್ಟ್ ವಿಶೇಷ**



ಅದೊಂದು ಮಧುಮಾಸದ ದಿನ. ಪಾಂಡು ರಾಜನು ತನ್ನ ಎರಡನೇ ಮಡದಿಯಾದ ಮಾದ್ರಿ, ಒಂದೇ ಒಂದು ತುಂಡು ಬಟ್ಟೆಯನ್ನು ಉಟ್ಟಿದ್ದಳು. ಸುಂದರಿ ಮಾದ್ರಿ ಮಾತ್ರ ಅವನ ಜೊತೆಗಿದ್ದಳು. ಪಾಂಡು ರಾಜ ನಿಯಂತ್ರಣ ತಪ್ಪಿದ. ದೇಹದ ವಾಂಛೆಗೆ ಮಾರುಹೋಗಿದ್ದ. ನಿರ್ಜನ ವನದಲ್ಲಿ ಮಾದ್ರಿಯನ್ನು ಬಲವಂತವಾಗಿ ಹಿಡಿದಪ್ಪಿಕೊಂಡ. ಅವನಿಗೂ ಈ ನಿಸರ್ಗದ ಮಡಿಲಲ್ಲಿ ರತಿಯಾಟದ ರತಿಸುಖ ಪಡೆಯುವ ಬಯಕೆ ಭುಗಿಲೆದ್ದಿತ್ತು. ಆದರೆ ಮಾದ್ರಿಯು ನುಣುಚಿಕೊಳ್ಳಲು ಅವಳೆಷ್ಟೇ ಪ್ರಯತ್ನಿಸಿದರೂ ಬಿಡದೇ ಪಾಂಡುರಾಜನು ಅವಳನ್ನು ಕೂಡಿದ.

## ಏನಾಗಿದೆ ಈಗಿನ ಮಕ್ಕಳಿಗೆ ಎತ್ತ ಸಾಗುತ್ತಿದೆ ಈ ಸಮಾಜ!

ಹುಟ್ಟುವಾಗ ಎಲ್ಲಾ ಮಕ್ಕಳುಗಳೂ ವಿಶ್ವಮಾನವರೇ ಆಗಿರುತ್ತಾರೆ, ಬೆಳೆಯುತ್ತಾ ಬೆಳೆಯುತ್ತಾ ಅವರು ಕುಬ್ಜಮಾನವರಾಗುತ್ತಾರೆ ಎಂದು ನಮ್ಮ ರಾಷ್ಟ್ರಕವಿ ಕುವೆಂಪು ಹೇಳಿದರು. ಆದರೆ ಈಗಿನ ಪ್ರಕೃತ ಪರಿಸ್ಥಿತಿಯನ್ನು ನೋಡುತ್ತಿದ್ದರೆ ಕುಬ್ಜರಾದರೂ ಪರವಾಗಿಲ್ಲ, ಅಪರಾಧಿಗಳಾಗಬಾರದು ಎಂಬ ಸಂದಿಗ್ದತೆ ಬಂದೊದಗಿದೆ. ಜೊತೆಗೆ ಮಕ್ಕಳೇ ದೇವರೆನ್ನುವ ಭಾವದಿಂದ ಕೂಡಿದ ಮನಸ್ಸುಗಳು ಎನ್ನುವ ಮನಸ್ಥಿತಿ ನಮ್ಮದಾಗಿದ್ದರೂ ಸಹ ಅದೆಲ್ಲೋ ಒಂದು ಕಡೆ ಮಕ್ಕಳಿಗೆ ಸಂಸ್ಕಾರ ಕೊಡುವಲ್ಲಿ, ಸಂಸ್ಕೃತಿಯಾಚರಣೆ ಮಾಡಿಸುವಲ್ಲಿ, ಸದ್ವಿಚಾರದ ಬಗ್ಗೆ ಮಾತನಾಡದೆ ಇದ್ದು, ಕೇವಲ ಯಾಂತ್ರೀಕೃತವಾದ ಮಕ್ಕಳ ಬೆಳವಣಿಗೆ ಇದಕ್ಕೆಲ್ಲಾ ನಾಂದಿಯಾಗಿದೆ ಎಂದರೂ ತಪ್ಪೇನಿಲ್ಲ. ಹುಟ್ಟುವಾಗ ಎಲ್ಲಾ ಮಕ್ಕಳು ಖಾಲಿ ಕಂಪ್ಯೂಟರ್‌ಗಳೇ ಆಗಿರುತ್ತಾರೆ, ನಾವು ಮತ್ತು ಈ ಪರಿಸರ ಯಾವ ರೀತಿ ಪ್ರೋಗ್ರಾಮಿಂಗ್ ಮಾಡುತ್ತೇವೆಯೋ ಆ ರೀತಿ ಮಕ್ಕಳೆಂಬ ಖಾಲಿ ಕಂಪ್ಯೂಟರ್‌ಗಳು ಶುಭ ಅಥವಾ ಅಶುಭದೆಡೆಗೆ ವಾಲುತ್ತವೆ. ಹೀಗೆ ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರದಿಂದಿಡಿದು, ಪರಿಸರ, ಗೀಳು, ಗೋಳು, ಉತ್ಕೃಷ್ಟ ಸಂಸ್ಕಾರ, ಪರಂಪರೆಯ ನಾಂದಿ, ನಡವಳಿಕೆ ಹೀಗೆ ಎಲ್ಲವೂ ಪಸರಗೊಳ್ಳುತ್ತವೆ.

ಕಿರಣ ಧಗೆಯಾಗುವುದು, ಸೆರಗು ಸಿಡಿಲಾಗುವುದು
ಮನಸು ಮಂಕಾಗುವುದು ಒಲುಮೆ ಮುನಿದಾಗ
ನೇಹ ಕಿಡಿಕಾರುವುದು, ದೀಪ ಉರಿಯಾಗುವುದು
ಒಲವ ಒರತೆ ಕೊರತೆಯಾದಾಗ - ಮುದ್ದುರಾಮ

ಎಂದು ಕೆ.ಸಿ. ಶಿವಪ್ಪನವರು ತಮ್ಮ ಮುದ್ದುರಾಮ ಕೃತಿಯ ಮುಕ್ತಕದಲ್ಲಿ ಬರೆಯುತ್ತಾರೆ. ಹೌದಲ್ಲವೇ ಮಕ್ಕಳು ಬಾಳ ಕಿರಣವಿದ್ದಂತೆ, ಅವರಿಗೆ ಸಂಸ್ಕಾರವಿಲ್ಲದೆ ಹೋದಲ್ಲಿ ಅವರೇ ನಮ್ಮ ಬಾಳಿಗೆ ಧಗೆಯಾಗುವರು. ಹೆತ್ತವರ ಮನಸ್ಸು ಮಂಕಾಗುವುದು ಮಕ್ಕಳ ಮೇಲಿನ ಒಲುಮೆ ಮುನಿದಾಗ, ಯಾಂತ್ರೀಕೃತ ಬದುಕಿನ ವ್ಯವಸ್ಥೆಯಿಂದ ಒಲವೆಂಬ ಒರತೆ ಪಸರಿಸದೆ ಮಕ್ಕಳಿಗೂ, ಹಿರಿಯರಿಗೂ ಪ್ರೀತಿಯ ಕೊರತೆ ಉಂಟಾಗಿ ಬಲು ಹಿಂಸೆ ಎನಿಸುವುದು ಸಹ ಸತ್ಯವಲ್ಲವೇ ? ಕೊನೆಗೆ ಎಲ್ಲ ಇದ್ದರೂ ದುಃಖಕ್ಕೆ ನಾಂದಿ ಹಾಡಿದಂತಾಗುವುದಿಲ್ಲವೇ ?

ಒಡನೇಯೇ ಆತ ಮೃತ ಪಟ್ಟವನಾಗಿದ್ದ. ಕೊನೆಗೆ ಮಾದ್ರಿ ಕೂಗಿದಳು. ಕುಂತಿ ಓಡೋಡಿ ಬಂದಳು.

ಗೊತ್ತಿದ್ದೂ ಗೊತ್ತಿದ್ದೂ ಇದೇನು ಹೀಗೆ ಸಹಕರಿಸಿದೆ ಎಂದು ಮಾದ್ರಿಯನ್ನು ಬೈದಳು. ಆಮೇಲೆ, ನೀನೇ ಧನ್ಯೆ ಮತ್ತು ನನಗಿಂತಲೂ ಭಾಗ್ಯವಂತೆ ರಾಜನ ಸುಖೋನ್ಮತ್ತ ಮುಖವನ್ನು ನೋಡಿದ ಅದೃಷ್ಟವಂತೆ ನೀನು ಎಂದು ನಿಟ್ಟುಸಿರುಬಿಟ್ಟಳು. ರತಿಯ ಉತ್ತುಂಗದ ಆ ಮುಖ, ಆ ಸುಖ !

ಕುಂತಿ ಸಹಗಮನಕ್ಕೆ ಮುಂದಾದಳು. ಆದರೆ ಮಾದ್ರಿಯು ಆಕೆಯನ್ನು ಬಿಡಲಿಲ್ಲ. ನನ್ನನ್ನು ಬಯಸುತ್ತಲೇ ಅವನು ಸತ್ತಿದ್ದಾನೆ. ಅರ್ಧಕ್ಕೆ ನಿಂತ ಅವನ ಕಾಮವನ್ನು ನಾನು ಹೇಗೆ ತಾನೆ ಪೂರೈಸದೇ ಇರಲಿ ಎಂದಳು.

ಕಾಮ ಸಹಗಹಮನದಲ್ಲಾದ ವಿಪತ್ತು ಚಿತೆಯ ಸಹಗಮನದತ್ತ ತಲುಪಿತು. ಮಾದ್ರಿ ಚಿತೆ ಏರಿದವಳಾಗಿದ್ದಳು. ಎಲ್ಲಾ ಮುಗಿಯಿತು. ಆದರೆ ಆರಂಭವಾಗಬೇಕಾಗಿರುವುದು ಇನ್ನು ಮುಂದೆ !!

ಶತಶೃಂಗದ ಋಷಿಮುನಿಗಳು ಸೇರಿಕೊಂಡು ಕುಂತಿಯನ್ನೂ ಮಕ್ಕಳನ್ನೂ ಹಸ್ತಿನಾಪುರಕ್ಕೆ ಕರೆದುಕೊಂಡು ಬಂದರು. ಕುಂತಿಯನ್ನೂ ಮತ್ತು ಅವಳ ಮಕ್ಕಳನ್ನೂ ಅರಮನೆಗೆ ಸೇರಿಸಿ ಹೋದರು. ಅದೊಂದು ದಿನ ವ್ಯಾಸರು ಅರಮನೆಗೆ ಬಂದರು. ತಾಯಿ ಸತ್ಯವತಿಯನ್ನು ಕಂಡರು. ಶ್ವ: ಶ್ವ: ಪಾಪೀಯದಿವಸಾ: ಪೃಥಿವೀ ಗತಯೌವನಾ ಎಂದರು. ಅಂದರೆ ಅಮ್ಮಾ, ಸುಖದ ಕಾಲಗಳು ಮುಗಿದವು. ಮುಂದೆ ಬರಲಿರುವುದು ದಾರುಣ ಕಾಲಗಳು. ಯೌವನವನ್ನು ಕಳೆದುಕೊಳ್ಳುತ್ತಿರುವ ಈ ಭೂಮಿಯಲ್ಲಿ ಮುಂದಿನ ಒಂದೊಂದು ದಿನವೂ ಹಿಂದಿನ ದಿನಕ್ಕಿಂತ ಪಾಪಿಯಾಗಿರುತ್ತದೆ. ಘೋರ ಕಾಲವು ಬರುತ್ತದೆ. ಈ ಕುಲದ ಘೋರ ಕ್ಷಯವನ್ನು ನೀನು ನೋಡುವುದು ಸರಿಯಲ್ಲ. ಇವೆಲ್ಲವನ್ನೂ ತ್ಯಜಿಸಿ ಹೊರಟುಹೋಗು. ತಪೋವನದಲ್ಲಿ ವಾಸಿಸು.. ಎಂದರು. ಮಗನ ಮಾತಿನಂತೆ ಸತ್ಯವತಿ ತನ್ನಿಬ್ಬರು ಸೊಸೆಯಂದಿರ ಜೊತೆ ಕಾಡಿಗೆ ಹೋದಳು.

ಇಲ್ಲಿ ಈ ಮೇಲ್ಕಂಡ ಮಹಾಭಾರತದ ಕಥೆಯೊಂದಿಗೆ ಗಮನಿಸಬೇಕಾದ ಒಂದು ಅಂಶವಿದೆ. ವ್ಯಾಸರು ಹೇಳುವ ಶ್ವ: ಶ್ವ: ಪಾಪೀಯದಿವಸಾ: ಪೃಥಿವೀ ಗತಯೌವನಾ ಎಂಬ ಮಾತು ಈ ಕಾಲಘಟ್ಟಕ್ಕೆ ಬಹಳವೇ ಆಪ್ತವಾಗುತ್ತಿದೆ. ಈ ಭೂಮಿ ಮುಂದಿನ ಒಂದೊಂದು ದಿನವೂ ಹಿಂದಿನ ದಿನಕ್ಕಿಂತ ಪಾಪಿಯಾಗಿರುತ್ತದೆ. ಈ ಮನುಷ್ಯ ಕುಲವು ಸ್ವಾರ್ಥದ ಕ್ಷಯಕ್ಕೆ ಬಲಿಯಾಗುತ್ತದೆ ಎಂದು ಹೇಳಿರುವುದು ಬಹಳ ಆಪ್ತವಾಗಿ ಕಾಣುತ್ತಿದೆ. ಕಾರಣ ಇತ್ತೀಚಿಗೆ ವರದಿಯಾಗುತ್ತಿರುವ ಕೆಲವು ಕ್ರಿಮಿನಲ್ ಪ್ರಕರಣಗಳನ್ನು ಅವಲೋಕಿಸಿದರೆ ಜಗತ್ತಿನ ಮುಂದೆ ಕಣ್ಣು ತೆರೆಯುವ ಹೊತ್ತಿನಲ್ಲಿ ಅಬಾಲರು ಕೆಲವು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವುದು ನಿಜವಾಗಿಯೂ ಆಘಾತ ತರುವಂತಿದೆ. ಇಂತಹ ಕೆಲವು ಸ್ಯಾಂಪಲ್‌ಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಯುವ ಜನತೆ ಎತ್ತ ಸಾಗುತ್ತಿದೆ? ಯುವ ಜನತೆ ಎಂದರೆ ಅದು ಯುವ ಭಾರತವೇ ಹೌದು. ಶಾಂತಿ ಮಂತ್ರವ ಪಠಿಸಿರುವ ಈ ನೆಲದಲ್ಲಿ ರಕ್ತದೋಕುಳಿ ಸರಿಯೆ ಎನ್ನುವ ಜಿಜ್ಞಾಸೆ ಮನದಲ್ಲಿ ಮೂಡದಿರಲಾರದು !! ಮುಂದೆ ಓದಿ ನೋಡಿ ಅದರ ಆಳ ಅಗಲ ನಿಮಗೆ ಅರ್ಥವಾಗುತ್ತದೆ.

ಮೊನ್ನೆ ಮೊನ್ನೆ ಹುಬ್ಬಳ್ಳಿಯ ಕಮರೀಪೇಟೆಯಲ್ಲಿ 14 ವರ್ಷದ ಬಾಲಕನಿಗೆ ಚಾಕುವಿನಿಂದ ಇರಿದು ಕೊಂದ ಬಾಲಕನ ವಯ್ಯಸ್ಸು ಜಸ್ಟ್ 12. ಹುಬ್ಬಳ್ಳಿಯ ಬೆಂಡಿಗೇರಿಯಲ್ಲಿ ಉಳ್ಳವರು ಬಡ್ಡಿ ದಂಧೆಯಲ್ಲಿ ಬಡ್ಡಿ ಹಣವನ್ನು ಕೀಳಲು ಉಪಯೋಗಿಸಿಕೊಳ್ಳುತ್ತಿದ್ದ ಬಾಲಕರ ವಯಸ್ಸು ಜಸ್ಟ್ 15 ರಿಂದ 18, ಹುಬ್ಬಳ್ಳಿ ಧಾರವಾಡದ ಪೊಲೀಸ್ ಕಮೀಷನರೇಟ್ ಅಡಿಯಲ್ಲಿ ವರದಿಯಾಗಿದ್ದ 2 ಕೊಲೆ, 3 ಸುಲಿಗೆ, 7 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಬಾಲಕರ ವಯಸ್ಸು ಜಸ್ಟ್ 15 ರಿಂದ 17, ಇದು ಕೇವಲ ಕರ್ನಾಟಕದ ಒಂದು ಕಮೀಷನರೇಟ್‌ನ ಚಿತ್ರಣವಾದರೆ ಇನ್ನುಳಿದ 5 ಕಮೀಷನರೇಟ್ ಮತ್ತು ಇತರೆ ಜಿಲ್ಲೆಗಳಿಂದ ಅದೆಷ್ಟು ಬಾಲಕರು ಈ ಪರಿಯ ಕ್ರಿಮಿನಲ್ ಆಕ್ಟ್ ಮಾಡಿರಬೇಡ! ಇದನ್ನು ಹೊರತುಪಡಿಸಿ ನಮ್ಮ ದೇಶದಲ್ಲಿ ಇತ್ತೀಚಿಗಿನ ಕೆಲವು ಕ್ರಿಮಿನಲ್ ಕೃತ್ಯಗಳನ್ನು ಅವಲೋಕಿಸಿ ನೋಡಿದರೆ !!!

ಬೆಂಗಳೂರಿನ ರಾಜಾಜಿ ನಗರದಲ್ಲಿ ಬಾಲೆಯೇ ತನ್ನ ತಂದೆಯ ಹತ್ಯೆ ಮಾಡಿದಳು, ಆ ಬಾಲೆಯ ವಯಸ್ಸು 16, ಮೊನ್ನೆ ಮೊನ್ನೆ ಹೆತ್ತ ಮಗನೇ ಅಪ್ಪನಿಗೆ ವಿದ್ಯುತ್ ಷಾಕ್ ನೀಡಿ ಹತ್ಯೆ ಮಾಡಿದ, ಆತನ ವಯಸ್ಸು ಜಸ್ಟ್ 17, ಮೇಘಾಲಯದಲ್ಲಿ ಹನಿಮೂನ್ ಹೋದ ಮದುಮಗನನ್ನು ಹೆಂಡತಿ ಸುಪಾರಿ ಕೊಟ್ಟು ಕೊಲ್ಲಿಸಿದ ಪ್ರಕರಣದಲ್ಲಿ ಕೊಂದವರ ವಯಸ್ಸು ಜಸ್ಟ್ 19-22-23, ಮೀರತ್‌ನಲ್ಲಿ ಮದುವೆಯಾಗಿ ಎರಡೇ ವಾರದಲ್ಲಿ ಹೆಂಡತಿ ಗಂಡನನ್ನು ಎರಡು ಲಕ್ಷ ರೂಪಾಯಿ ಕೊಟ್ಟು ಕೊಲ್ಲಿಸಿದ ಪ್ರಕರಣದಲ್ಲಿ ಕೊಂದವನ ವಯಸ್ಸು ಜಸ್ಟ್ 22.

ಜೈಪುರದ ಶಿವದಾಸಪುರದಲ್ಲಿ ಒಂದೂವರೆ ಲಕ್ಷ ರೂಪಾಯಿ ವ್ಯವಹಾರಕ್ಕೆ ವ್ಯಾಪಾರಿಯನ್ನು ಕೊಂದವನ ವಯಸ್ಸು 24. ಕೊಲಂಬಿಯಾದಲ್ಲಿ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಿದವ ತಲೆಗೆ ಶೂಟ್ ಮಾಡಿದವನ ವಯಸ್ಸು ಜಸ್ಟ್ 15.

### ಮಕ್ಕಳಲ್ಲಿ ಅಪರಾಧಿಕ ಮನೋಭಾವ ಬೆಳೆಯಲು ಹಲವಾರು ಕಾರಣಗಳಿವೆ. ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಣೆ ಮಾಡುವುದಾದರೆ

★ ಕೌಟುಂಬಿಕ ಕಾರಣಗಳು
★ ಶಾಲಾ ಪರಿಸರ ಮತ್ತು ಶಿಕ್ಷಣದ ಪ್ರಮಾಣ
★ ಪರಿಸರದ ಹಿರಿಯರ ನಡವಳಿಕೆ
★ ಆರ್ಥಿಕ ಮತ್ತು ಸಾಮಾಜಿಕ ಕಾರಣಗಳು
★ ಮಾನಸಿಕ ಸ್ಥಿತಿಗತಿ
★ ಮಾಧ್ಯಮ ಹಾಗೂ ತಾಂತ್ರಿಕತೆಯ ಸೋಷಿಯಲ್ ಮೀಡಿಯಾ
★ ನೈತಿಕತೆ ಕೊರತೆಯ ಪ್ರಭಾವ
★ ಹಿರಿಯರಲ್ಲಿ ಕಾಠಿಣ್ಯತೆಯ ಕೊರತೆ
★ ಕಠಿಣ್ಯತೆಯನ್ನು ಎದುರಿಸದ ಪರಿಸ್ಥಿತಿ
★ ಸುಲಭದಲ್ಲಿ ಹಣ ಗಳಿಸುವ ವಾಂಛೆ
★ ಹಿರಿಯರ ನಡತೆಯ ಗುಣಮಟ್ಟ
★ ಸಂಗಾತಿಗಳ ಆಯ್ಜೆಯಲ್ಲಿ ತಪ್ಪು ಕ್ರಮ
★ ಮಾನಸಿಕ ಒತ್ತಡ
★ ಆಯ್ಕೆಯಲ್ಲಿ ತಪ್ಪುತನ
★ ಅಸಮಾನತೆಯ ಕೀಳರಿಮೆ
★ ಹಣ, ಸಮಯ, ವಯಸ್ಸಿನ ಗುಣ ಮಟ್ಟವನ್ನರಿಯದಿರುವುದು

ಇವುಗಳು ಮೇಲ್ನೋಟಕ್ಕೆ ಕಂಡುಬರುತ್ತವೆ, ಇವೆಲ್ಲವುದರ ಜೊತೆಗೆ ಇನ್ನೂ ಹೆಚ್ಚಿನ ಅಂಶಗಳು ಪ್ರಭಾವಿಸುತ್ತವೆ. ಮಕ್ಕಳನ್ನ ಹಡೆಯುವುದು ಸಾಧನೆಯಲ್ಲ, ಅವರನ್ನು ಈ ಸಮಾಜದ ಆಸ್ತಿಯನ್ನಾಗಿ ಮಾಡುವುದು ಸಾಧನೆ ಎಂಬ ಅರಿವಿನ ಕೊರತೆಯೂ ಇದೆ. ಇವುಗಳ ಬಗ್ಗೆ ನಾಳೆಯ ಬರಹದಲ್ಲಿ ಬರೆಯುವೆ. (ಮುಂದಿನ ಭಾಗ ನಾಳೆಯ ಸಂಚಿಕೆಯಲ್ಲಿ)



ಮಂಗಳೂರು ಸುಹಾಸ್ ಶೆಟ್ಟಿ ಹತ್ಯೆ ಆರೋಪಿಗಳ ಪಟ್ಟಿಯಲ್ಲಿ ಜಸ್ಟ್ 19-20 ವರ್ಷ ವಯಸ್ಸಿನವರು, ಬಂಟ್ವಾಳದಲ್ಲಿಯ ಅಬ್ದುಲ್ ರಹಿಮಾನ್ ಕೊಲೆ ಆರೋಪಿಗಳ ಪಟ್ಟಿಯಲ್ಲಿ ಮೂವರು ಜಸ್ಟ್ 19-21-21 ವಯಸ್ಸಿನವರು.

ಇತ್ತೀಚಿಗಿನ ಯಾವುದೇ ಕ್ರಿಮಿನಲ್ ನಡೆಯನ್ನು ನೀವು ಎಲ್ಲೇ ನೋಡಿ, ನಿಮ್ಮ ಕಾಲಬುಡದಿಂದ, ನಿಮ್ಮ ತಾಲ್ಲೂಕಿನಿಂದ, ನಿಮ್ಮ ಜಿಲ್ಲೆಯಿಂದ ಜಗತ್ತಿನ ಯಾವುದೋ ಮೂಲೆಯ ತನಕ ಒಂದು ಬಾರಿ ಕ್ರಿಮಿನಲ್‌ಗಳು, ಕೊಲೆಗಡುಕರ ಪಟ್ಟಿ ತೆರೆದು ನೋಡಿ, ಕೃತ್ಯ ಎಸಗಿದ ಹೆಚ್ಚಿನವರು ಎಳಸು ವಯಸ್ಸಿನವರೇ ಅತಿ ಹೆಚ್ಚು ಇರುವುದು. ಏನಾಗುತ್ತಿದೆ? ಈ ಹುಡುಗು ವಯಸ್ಸಿನವರೇ ಏಕೆ ಕೊಲೆಗಾರರಾಗುತ್ತಿದ್ದಾರೆ. ಇನ್ನೂ ಲೋಕವನ್ನರಿಯದ, ಬದುಕಿನ ಸಾರವನ್ನರಿಯದ, ಕಣ್ಣಿಗೆ ಜಗತ್ತೇನೆಂದು ತಿಳಿಯದದ ಎಳೆಯರು ತಮ್ಮ ಬದುಕನ್ನು ಕಟ್ಟಿಕೊಳ್ಳುವ ಹೊತ್ತಿನಲ್ಲಿ ಕ್ರಿಮಿನಲ್‌ಗಳಾಗುತ್ತಿರುವುದೇಕೆ ?

ಸುಲಭದ ಹಣದಾಸೆಗಾ? ಮೊಬೈಲ್ ಗೀಳಿನಲ್ಲಿ ಕ್ರೈಮ್ಸ್ ನೋಡಿ, ಕ್ರೈಮ್ ಆಟವನ್ನೇ ಆಡುವ ಗೀಳಾ? ಸಾಮಾಜಿಕ ಒತ್ತಡಕ್ಕಾ? ಗ್ಯಾಂಗ್ ಅಫಿಲಿಯೇಶನ್ನಾ? ಸೈಕಾಲಜಿಕಲ್ ಕಾರಣವಾ? ಐಡಿಯಾಲಜಿಗೆ ಅತಿಯಾಗಿ ಜೋತು ಬಿದ್ದುದರಿಂದಲಾ? ಹೆತ್ತವರ ನಿರ್ಲ್ಯಕ್ಷವಾ? ವಿದ್ಯೆ ಮತ್ತು ಜ್ಞಾನ ಎಂಬುದು ವ್ಯಾಪಾರ ಸಗಟಾಗಿದ್ದರಿಂದಲಾ? ಬಡತನದಲ್ಲಿರುವ ಮಕ್ಕಳ ಮೇಲಿನ ಶೋಷಣೆಯ? ಹಣದ ಹಿಂದೆ ಬಿದ್ದೋಡುವ ತಂದೆ ತಾಯಿಗಳ ನಿರ್ಲ್ಯಕ್ಷವಾ? ಅಥವಾ ಸಾಮಾನ್ಯ ಜ್ಞಾನ, ಲೋಕ ಹಿತ, ಬೇಜಬ್ದಾರಿಯುತ ಶಿಕ್ಷಣವೇ? ಗೊತ್ತಿಲ್ಲ.

# ಇತಿಹಾಸದಲ್ಲಿ ಈ ದಿನ

## ಜೂನ್-13

**1997:** ದೆಹಲಿ ಉನ್ನತ ನ್ಯಾಯಾಲಯದ ಮೊದಲ ಮಹಿಳಾ ನ್ಯಾಯಾಧೀಶೆಯಾಗಿ ಲೀಲಾ ಸೆತ್ ನಿವೃತ್ತರಾದರು. (ಲೀಲಾ ಸೆತ್ ಅವರು ಭಾರತದ ಮೊದಲ ಮಹಿಳಾ ಮುಖ್ಯ ನ್ಯಾಯಾಧೀಶಿಯಾಗಿದ್ದರು, 1991ರಲ್ಲಿ ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶೆಯಾಗಿದ್ದರು.)

**1997::** ಪಠಾಣ್‌ಕೋಟ್‌ನಲ್ಲಿ ಭಾರತೀಯ ಸೇನೆಯ ಸೈನಿಕರ ಮೇಲೆ ಉಗ್ರರು ದಾಳಿ ನಡೆಸಿ ಹಲವರನ್ನು ಹತ್ಯೆ ಮಾಡಿದರು.

**2002:** ಗುಜರಾತ್ ಹಿಂಸಾಚಾರದ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನಾರೋದಾ ಪಾಟಿಯಾ ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ ಒಪ್ಪಿಸಿತು.

**1966:** ಅಮೆರಿಕದ ಸುಪ್ರೀಂ ಕೋರ್ಟ್‌ನಲ್ಲಿ ಪ್ರಸಿದ್ಧ ಮಿರಾಂಡಾ ವಿ. ಅರಿಜೋನಾ ತೀರ್ಪು ಹೊರಬಿತ್ತು, ಇದರಿಂದ ಅಪರಾಧಿಗಳ ಹಕ್ಕುಗಳ ಬಗ್ಗೆ ಆಮಿರಾಂಡಾ ಹಕ್ಕುಗಳುಟ ರೂಪುಗೊಂಡವು.

### ಜನನ

**1924:** ಬನಾರಸಿ ದಾಸ್ ಗುಪ್ತಾ, ಸ್ವಾತಂತ್ರ್ಯ ಹೋರಾಟಗಾರ ಹಾಗೂ ಹರಿಯಾಣದ ಮಾಜಿ ಮುಖ್ಯಮಂತ್ರಿ.

**1936:** ಕ.ಶಿ. ಪಾಟೀಲ, ಕನ್ನಡದ ಖ್ಯಾತ ಸಾಹಿತಿ, ನಾಟಕಕಾರ

### ಮರಣ

**1901:** ಪಂಡಿತ್ ದೀನದಯಾಳ್ ಶರ್ಮಾ, ಸಮಾಜ ಸೇವಕರಾಗಿದ್ದು, ಅನೇಕ ಸಾಮಾಜಿಕ ಹಕ್ಕುಚಳವಳಿಗಳಿಗೆ ಬೆನ್ನು ನೀಡಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248